

ಇಸದ ಉಂಡೆಯೇನೋ ಅನ್ನಿಸಿತು, ಶಾರದಮ್ಮನ ಮಾತು ಕೇಳಿ.

‘ಪರಿಮಳ ಮದುವೇಲಿ ನೀ ಓಡಾಡಿದ್ ರೀತಿಗೆ ಹಂಗಂತಿದ್ದಾಳೆ, ತಿನ್ನು ತಿನ್ನು’ ಹಾಲೇಶಪ್ಪ ತಿಪ್ಪೆ ಸಾರಿಸಿದ. ಕರಿಸಿದ್ದ ಬಾಯಿ ಕೆಟ್ಟದ್ ಮಾಡಿಕೊಂಡೇ ತಿನ್ನಲಾರಂಭಿಸಿದ.

ನೀರು ಕುಡಿದು ‘ಅಳಿಯಂದ್ರು ಬಂದು ಹೋದ್ರಂತೆ, ಏನಾರ ಸುದ್ದಿ? ಇಬ್ರು ಸಣ್ ಮಕ್ಕಳು, ದೊಡ್ಡ ಆಸ್ತಿ, ದನಕರು ಆಳು ಕಾಳು ಇರೋ ಮನೆ. ನಮ್ಮ ಪರಿಮಳ ಇದ್ದಿದ್ದರೆ ಯಾವ ಯೋಚನೆಯೂ ಇರ್ತಿರಲಿಲ್ಲ’ ಅನ್ನುತ್ತಾ ಎದುರಿಗೆ ನಿಂತ ಸಿದ್ರಾಮನನ್ನೇ ನೋಡಿದ. ಸಿದ್ರಾಮ ಒಂದೇ ಏಟಿಗೆ ಕುರಿ ಕಡಿಯೋನ ಹಾಗೆ ನಿಂತಿದ್ದ! ಅಳಿಯನ ವಿಚಾರ ಕೇಳಿದ ಕೂಡಲೇ ಶಾರದಮ್ಮ ಸೆರಗು ಬಾಯಿಗಿಟ್ಟುಕೊಂಡಳು.

ಅದಿನ್ನೂ ಮದುವೆಯಾದ ಹೊಸತು. ಅಳಿಯೂಟಕ್ ಬಂದ ಅವರು ಅತ್ಯಂತ ಆಪ್ತವಾಗಿ ಎಲ್ಲರೊಡನೆ ಬೆರೆತು ಮನೆ ಮಗನಾಗಿದ್ದು ಹಾಲೇಶಪ್ಪನವರಿಗಿಂತ ಶಾರದಮ್ಮಗೆ ಬಹಳ ಹಿತವೆನಿಸಿತ್ತು. ಒಳ್ಳೆಯ ಅಳಿಯ ಸಿಕ್ರೆ ಮನೆಗೆ ಮತ್ತೊಬ್ಬ ಮಗ ಸಿಕ್ಕಂತೆ ಅನ್ನೋ ಗಾದೆಯಂತೆಯೇ ಅಳಿಯ ಮಗನಂತಿದ್ದ.

ಮಗಳು ಪರಿಮಳ ಮಾತ್ರ ಆಗ ತವರಲ್ಲಿ ಇದ್ದಷ್ಟು ದಿನ ಗಂಡನ ಜೊತೆಗೆ ಇರದೇ ಬರಿ ಅಡುಗೆ ಮನೆ, ಅಮ್ಮನ ಸೆರಗು ಹಿಡಿದೇ ಓಡಾಡಿಬಿಟ್ಟಳು. ಹಾಲೇಶಪ್ಪರಿಗಿದು ವಿಚಿತ್ರ ಅನ್ನಿಸಿದರೂ ತವರಲ್ಲಿ ಹೀಗೆ... ಗಂಡನ ಮನೆಗೆ ಹೋದರೆ ಅಲ್ಲಿನಂತೆ ಇರ್ತಾಳೆ ಅಂತ ಸಮಾಧಾನ ಮಾಡಿಕೊಂಡಿದ್ದರು. ಅದೇ ವಿಷಯ ಶಾರದಮ್ಮನ ಬಳಿ ಪ್ರಸ್ತಾಪಿಸಿದಾಗಲೂ ‘ನಾನೂ ಗಮನಿಸಿದೆ, ನೀವು ಗಂಡಸರು ಇಂತವೆಲ್ಲಾ ಎಲ್ಲಿ ನೋಡ್ತೀರಿ ಅಂತ ಅಂದ್ಕೊಂಡಿದ್ದೆ... ಪರವಾಯಿಲ್ಲ ನಿಮಗೂ ಸೂಕ್ಷ್ಮ ಗೊತ್ತಾಗುತ್ತೆ’ ಅಂತ ಛೇಡಿಸಿದಾಗ ಹಾಲೇಶಪ್ಪ, ‘ಶಾರೂ, ನೀ ಹೆತ್ತಿರಬಹುದು, ಅವಳನ್ನ ಇಡೀ ಜನ್ಮ ಇಲ್ಲಿ ಈ ಎದೇಲಿ ಹೊತ್ತಿರೋದು, ಬಚ್ಚಿಟ್ಟುಕೊಂಡಿರೋದು ನಾನು ಕಣೇ. ಅವಳು ಹೆಜ್ಜೆ ಇಟ್ರೂ ಯಾಕಿಟ್ಲು, ಒಂದಕ್ಷರ ಆಡಿದ್ರೂ ಯಾವ ಅರ್ಥಕ್ಕೆ ಮಾತನಾಡಿದಳು ಅಂತ ಗಮನಿಸೋ ನಾನು ಮಗಳ ಬಗ್ಗೆ